ದಿ.13.11.2024 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀ ಬಿ.ಎಸ್.ಎಂ ವಕೀಲರಿಂದ.**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು, ಅದರಲ್ಲಿರುವ ಸಂಗತಿಗಳೆಲ್ಲಾ ಸತ್ಯವಿದ್ದು, ಅದನ್ನು ನಾನೇ ಹೇಳಿ ಬರೆಸಿದ್ದೇನೆ ಹಾಗೂ ಪ್ರಮಾಣ ಪತ್ರಕ್ಕೆ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿಂದ ಮುಖ್ಯವಿಚಾರಣೆಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

*(ರಾಘವೇಂದ್ರ. ಡಿ.)*
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ

ದಿ.08.01.2026 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು

**ಪಾಟೀ ಸವಾಲುಃ ವಾದಿ ಪರ ವಕೀಲರಿಂದ ಶ್ರೀ ಹೆಚ್.ಎಂ ವಕೀಲರಿಂದ**

**1.** ನನ್ನ ತಂದೆಯ ಹೆಸರು ಸಿಂಗಾರಿ ಗೌಡ ಮತ್ತು ನನ್ನ ತಾಯಿಯ ಹೆಸರು ಅಕ್ಕಮ್ಮ. ನನ್ನ ತಂದೆ ಮೃತಪಟ್ಟು ಸುಮಾರು 15 ವರ್ಷವಾಗಿರುತ್ತದೆ. ನನ್ನ ತಾಯಿ ಮೃತಪಟ್ಟು ಸುಮಾರು 13 ವರ್ಷವಾಗಿರುತ್ತದೆ. ನನ್ನ ತಂದೆ ತಾಯಿಗೆ ಚೆಲುವರಾಜು, ನಾರಾಯಣಸ್ವಾಮಿ ಅಲಿಯಾಸ್ ಅನಂತ, ಪ್ರಕಾಶ್, ಶಾಂತ ಎಂಬ ನಾಲ್ಕು ಜನ ಮಕ್ಕಳು. ಶಾಂತರವರು ನನ್ನ ಸಹೋದರಿ ಅಲ್ಲ ಎಂದರೆ ಸರಿಯಲ್ಲ. ಶಾಂತರವರು ಭದ್ರಾವತಿಯ ವೆಲೂರು ಶೆಡಿನಲ್ಲಿ ಮದುವೆಯಾಗಿ ಅವರ ಗಂಡ ರಾಜು ರವರ ಮನೆಯಲ್ಲಿ ವಾಸವಾಗಿರುತ್ತಾರೆ. ಶಾಂತರವರಿಗೆ 40 ವರ್ಷ ವಯಸ್ಸಾಗಿರುತ್ತದೆ. 02 ವಾದಿ ಪ್ರಕಾಶ ರವರ ಒಬ್ಬಳೆ ಮಗಳು ಎಂದರೆ ಸರಿ. ಪ್ರಕಾಶ್ ರವರು ದಿಃ 06-05-2003 ರಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸರಿ. ನನ್ನ ತಂದೆ ಮೂಲತಹಃ ಮಂಡ್ಯ ಜಿಲ್ಲೆಯ ಅಗ್ರಾಂಪುರದವರು. ನನ್ನ ತಂದೆ ವಿ.ಎಸ್.ಐ.ಎಲ್ ನಲ್ಲಿ ಕೆಲಸದಲ್ಲಿದ್ದರು ಮತ್ತು quarters ನಲ್ಲಿ ವಾಸವಾಗಿದ್ದರು. ನನ್ನ ತಂದೆಯ ಅಣ್ಣನ ಹೆಸರು ಬೆಟ್ಟಯ್ಯ. ಅವರು ಸಹ ವಿ.ಎಸ್.ಐ.ಎಲ್ ನಲ್ಲಿ ಕೆಲಸದಲ್ಲಿದ್ದರು ಮತ್ತು ವಿ.ಎಸ್.ಐ.ಎಲ್ quarters ನಲ್ಲಿ ವಾಸವಾಗಿದ್ದರು. ಬೆಟ್ಟಯ್ಯನವರಿಗೆ ಇಬ್ಬರು ಹೆಂಡತಿಯರು ಮತ್ತು ಲಕ್ಷ್ಮೀ ಎಂಬ ಒಬ್ಬಳೇ

ಮಗಳು. ನನ್ನ ತಾತಾ ಜವರಯ್ಯನವರನ್ನು ನಾನು ನೋಡಿರುವುದಿಲ್ಲ. ನನ್ನ ತಾತಾ ಅವರ ಊರಿನಲ್ಲಿ ಇದ್ದರು ಎಂದು ಗೊತ್ತಾಗಿರುತ್ತದೆ.

**ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

*(ರಾಘವೇಂದ್ರ. ಡಿ.)*
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ